**O.S. No.24/2019. PW:1**

**ದಿನಾಂಕ 19.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಶ್ರೀ ಕೆ ವಿ ಎಂ ವಕೀಲರಿಂದ ಃ-**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಶಪತ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳೆಲ್ಲಾ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿ ನನ್ನ ಸಹಿ ಇರುತ್ತದೆ.

ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಅದೇ ರೀತಿ ಒಂದು ಪಹಣಿ ಪತ್ರಿಕೆಯನ್ನು ನಿಪಿ 2 ಎಂದು, ಎಂ.ಆರ್.ಅನ್ನು ನಿಪಿ 3 ಎಂದು, ದಿಃ02.01.2002 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ 4 ಎಂದು, ದಿಃ03.06.2014 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ 5 ಎಂದು, ದಿಃ27.06.2018 ರ ಕ್ಷೇತ್ರ ಶಿಕ್ಷಣಾಧಿಕಾರಿ-ಬೀರೂರುರವರು ನೀಡಿರುವ ಜ್ಞಾಪನ ಪತ್ರವನ್ನು ನಿಪಿ 6 ಎಂದು, ದಿಃ21.07.2018 ರಂದು ಉಪ ನಿರ್ದೇಶಕರು-ಚಿಕ್ಕಮಗಳೂರು ರವರು ನೀಡಿರುವ ನೋಟೀಸನ್ನು ನಿಪಿ 7 ಎಂದು, ದಿಃ21.08.2018 ರ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ -ಚಿಕ್ಕಮಗಳೂರು ರವರು ನೀಡಿದ ನೋಟೀಸನ್ನು ನಿಪಿ 8 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-
3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು